



ಅರುಣ ಪಿ. ಭಟ್ಟ

## ವಾರಭವಿಷ್ಯ: 18.04.2024ರಿಂದ 24.04.2024ರವರೆಗೆ




ಆರಂಭದ ಎರಡು ದಿನದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸದ ವಾತಾವರಣ. ಮನೆ ಬಾಡಿಗೆಯಿಂದ ಧನಲಾಭ. ರಾಜಕೀಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಉಳಿಸಿಕೊಳ್ಳುವ ಯೋಗ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ. ಬರತಕ್ಕ ಬಾಕಿ ಹಣ ಬರುವುದು. ಶುಭದಿನ 22. ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.




ವಾರದ ಪ್ರಾರಂಭದಲ್ಲಿ ಪ್ರವಾಸದಿಂದ ಮರಳಲಿದ್ದೀರಿ. ಸಹೋದರಿಯರಿಂದ ಶುಭವಾರ್ತೆ. ಹಸ್ತಾಲಂಕಾರ ವಸ್ತು ಖರೀದಿ. ವಾರದ ಮಧ್ಯದಲ್ಲಿ ಜ್ವರ ಪೀಡೆ ಕಾಡುವ ಸಾಧ್ಯತೆ ಇದೆ. ಕೋರ್ಟ್ ಪ್ರಕರಣದಲ್ಲಿ ಗೆಲುವು ನಿಮ್ಮಪಾಲಿಗೆ ಸಿಗುವ ಸಾಧ್ಯತೆಯಿದೆ. ಅವಮಾನಕರ ಪ್ರಸಂಗಗಳು ಜರುಗಬಹುದು. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಪರೋಪಕಾರ. ಶುಭದಿನ 24. ಈಶ್ವರನಿಗೆ ತಿಲಾರ್ಚನೆ ಮಾಡಿರಿ.




ದೈಹಿಕವಾಗಿ ಅಲರ್ಜಿ ಕಾಡಬಹುದು. ವಿನಾಕಾರಣ ಹೆದರಿಕೆ ಉಂಟಾಗುವ ಸಾಧ್ಯತೆ ಇದೆ. ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭಕ್ಕೆ ಯೋಜನೆ ನಡೆಯಲಿದೆ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ವಾಗ್ವರಿ ಪ್ರದರ್ಶನ. ಸಾಮಾಜಿಕ ಮನ್ನಣೆಯ ನಿಮ್ಮ ಕೆಲಸಕ್ಕೆ ಗೌರವ ಸಿಗಲಿದೆ. ಶುಭದಿನ 23. ಕಾರ್ತಿಕೇಯ ಸ್ತೋತ್ರ ಪಠಣ ಮಾಡಿರಿ.




ವಾರದ ಪ್ರಾರಂಭದಲ್ಲಿ ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಇರುತ್ತದೆ. ಲೆಕ್ಕಾಚಾರದಲ್ಲಿ ಜಾಗ್ರತೆ ಇರಬೇಕು. ವಾರವಿಡೀ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಲಭಿಸುವ ಸಾಧ್ಯತೆ. ಕಾಲಿಗೆ ನೋವು. ಆಸ್ಪತ್ರೆಗೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ 21. ಗುರುದತ್ತಾತ್ರೇಯ ಆರಾಧನೆ ಮಾಡಿರಿ.




ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತಗತಿಯಲ್ಲಿ ನಡೆಯುವುದು. ಪರಿಚಿತ ಮಹಿಳೆಯಿಂದಲೇ ವಿರೋಧವನ್ನು ಎದುರಿಸಬೇಕಾದ ಸಂದರ್ಭ ಎದುರಾಗಬಹುದು. ಪಶುಗಳ ವ್ಯಾಪಾರದಾರರಿಗೆ ಲಾಭ. ಹೊಟ್ಟೆನೋವಿನ ಪ್ರಸಂಗ. ಅಜ್ಞಾತವಾಸದಿಂದ ಬಿಡುಗಡೆ. ಮಹತ್ವದ ಮಾತುಕತೆ. ಶುಭದಿನ 22. ಹನುಮಾನ್ ಚಾಲೀಸ್ ಪಠಿಸಿರಿ.




ಅನಿರೀಕ್ಷಿತವಾಗಿ ಅಧಿಕ ಖರ್ಚಿನ ಪ್ರಸಂಗ ಎದುರಿಸುತ್ತೀರಿ. ಸರ್ಕಾರಿ ಕೆಲಸದಲ್ಲಿ ವ್ಯತ್ಯಯ. ಸೇವಕರಿಂದ ಹಾನಿ ಉಂಟಾಗಬಹುದು. ಬಂಧುಗಳಿಗೆ ಆಪತ್ತು. ಮನೆಗೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮದಲ್ಲಿ ಇರುವವರು ತಮ್ಮ ಪ್ರೇಮ ಭಗ್ನ ಪ್ರಸಂಗ ಕಾಣಬಹುದು. ಸರ್ಕಾರಿ ಅಧಿಕಾರಿಗಳಿಗೆ ಹಿನ್ನಡೆ ಆಗಬಹುದು. ಶುಭದಿನ 23. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.




ವಾರದ ಆರಂಭದಲ್ಲಿಯೇ ಉತ್ತಮ ಫಲ ಪ್ರಾಪ್ತಿ. ಆಕಸ್ಮಿಕ ಧನಲಾಭ ಆಗಲಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೇಕ್ಷಿಗಳಿಗೆ ಸಂಗಾತಿ ಲಭ್ಯ. ಮನೆಗೆಲಸದ ಹೊಸ ಸೇವಕರು ಸಿಗುವರು. ವ್ಯಾಪಾರದಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ 21. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಕಷ್ಟದಲ್ಲೂ ಇಷ್ಟ ಫಲ ವಾರವಿಡೀ ಪ್ರಾಪ್ತಿಯಾಗುವುದು. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರ್ಕಾರಿ ಅಧಿಕಾರ ಪ್ರಾಪ್ತ ಆಗುವ ಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಪ್ರಾಣಾಪಾಯ ಭೀತಿ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಿಸುವುದು. ಶುಭದಿನ 19. ದುರ್ಗಾ ಆರಾಧನೆ ಮಾಡಿರಿ.




ಆರೋಗ್ಯದಲ್ಲಿ ಏರುಪೇರು ಆಗಬಹುದು. ದಂಪತಿ ನಡುವೆ ಜಗಳ ಸಂಭವ. ಕಚೇರಿ ಕಾಗದ ಪತ್ರಗಳು ಹಠಾತ್ ಕಾಣೆಯಾಗುವಿಕೆ. ದೂರದಿಂದ ಅಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗ. ಹಿರಿಯ ಅಧಿಕಾರಿಗಳ ದಿಢೀರ್ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ಮನೆಯಲ್ಲಿ ದೇವತಾ ಪೂಜೆ ನಡೆಯುವುದು. ಶುಭದಿನ 20. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಪೂರ್ವದಿಕ್ಕಿನ ಪ್ರಯಾಣದಲ್ಲಿ ಅಪಘಾತ ಭಯ ಮನಸ್ಸಿನಲ್ಲಿ ಮೂಡಬಹುದು. ಕಾಲು ನೋವಿನ ಸಮಸ್ಯೆಗೆ ಪರಿಹಾರ ಸಿಗಲಿದೆ. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ನಿಮ್ಮ ವ್ಯಕ್ತಿತ್ವದ ಮುಂದೆ ಶತ್ರುಗಳು ತಲೆ ತಗ್ಗಿಸುವಂತೆ ಆಗುವುದು. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ದಾಂಪತ್ಯದಲ್ಲಿ ಸೌಖ್ಯ. ಹಣಕಾಸಿನ ತೊಂದರೆಗೆ ಪರಿಹಾರ. ಶುಭದಿನ 24. ನವಗ್ರಹ ಸ್ತೋತ್ರ ಮಾಡಿರಿ.




ಪ್ರಾರಂಭದಿಂದಲೂ ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಸರ್ಕಾರಿ ಕೆಲಸದಲ್ಲಿರುವವರಿಗೆ ಬಡ್ತಿಯ ಯೋಗ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭ ಕಾಣುವಿರಿ. ಮಿತ್ರರಿಂದ ವಂಚನೆಗೆ ತುತ್ತಾಗುವ ಸಂಭವವಿದೆ. ಮಕ್ಕಳ ಆರೋಗ್ಯ ಉತ್ತಮವಾಗಿರುವುದು. ಶುಭದಿನ 22. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.




ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯದ ನೋಟಿಸ್ ಬರಬಹುದು. ಕಲಾವಿದರಿಗೆ, ಸಂಗೀತಗಾರರಿಗೆ ವಾರದ ಮೊದಲರ್ಧ ಉತ್ತಮ. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕೆಟ್ಟ ಜನರಿಂದ ಧನಪ್ರಾಪ್ತಿ. ಕುಟುಂಬ ಸೌಖ್ಯ. ಶುಭದಿನ 19. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.